

4
ನನ್ನ ನಾಲಗೆಯಿಂದ
ಉದುರುವ ಮಾತು
ನಾನಲ್ಲ
ತಲೆತಿರುಗಿ
ಬೀಳುತಿರುವಾ ಏಳುತಿರುವಾ
ದೀಪದ ಕುಡಿ ಬೆಳಕಿನಲಿ
ಎಲೆ ಮಾನವ
ಅದು ನೆಕ್ಕವುದು
ನನ್ನ ಕುರುಡು
ಮೌನವ



5
ಸಾವಿನ ತಳದಲಿ
ತಳವೂರಿದೆ ನೆನಪು
ನೆನಪಿನ ತಳ ಯಾವುದು?
ಸಾವಿನ ತಳವ
ದತ್ತು ತೆಗೆದುಕೊಂಡ ಮೇಲೆ
ನೆನಪಿಗೆ ಇನ್ನು ನೆನಪ್ಯಾವುದು?

6
ಅಂತ್ಯ ಬಂದೇ ಬರುತ್ತದೆ
ನಾವು ನಿಂತ ನೆಲವೇ ಕುಸಿಯುತ್ತಿದೆಯೇನೋ ಎಂಬಂತೆ,
ನಾವಾಡುವ ಮಾತಿಗೆ ಏನೇನೂ ಬೆಲೆಯಿಲ್ಲ;
ಮಳೆ ಬಾರದೆ ಬರಿ ಮೋಡಗಳು ಅರಳಿ ಬಿರಿಯುತ್ತಿವೆ ಎಂಬಂತೆ
ಕೇವಲ ಶರಣಾಗತಿ ಎಂಬ
ಅಸಹನೆಯ ಅವಿರೋಧ ಆಕಾಶದಲ್ಲಿ

7
ಕವಿತೆಯಲಿ ಮುಚ್ಚಿಹೋದ
ನನ್ನ ದನಿಯನು
ಭೂಮಿ ಪತ್ತೆ ಹಚ್ಚುವುದು.
ಕಡು ಕೋಪದಲಿ
ಗಿರ್ರನೆ ತಿರುಗುವುದದು
ಲಯತಪ್ಪದೇ...
ಭೂಮಿ ತಿರುಗುವ ಸದ್ದು
ಚಂಡ ಮಾರುತವಾಗಿ
ಜಗತ್ತಿನ ಅಂತ್ಯ ಹಾಡುವುದು
ತೀವ್ರವಾದ ರಾತ್ರಿಯ
ನಡಿಗೆಯಲಿ

